ಕುಸಿಯುವಂತೆ ಕಂಡಿತು. ಭೂಮಿಯೊಳಗಿನಿಂದ ಬಿಸಿಗಾಳಿ ಭುಗ್ಗನೆ ಉಕ್ಕಿಬಂತು. ಅಷ್ಟೂ ಜನ ಹೊರಗೆ ಓಡಿ ತಿರುಗಿ ನೋಡುವಷ್ಟರಲ್ಲಿ ಮನೆ ನೆಲ ಕಂಡಿತ್ತು. ಕೂದಲೆಳೆಯ ಅಂತರದಲ್ಲಿ ಅವರ ಪ್ರಾಣ ಬಚಾವಾಗಿತ್ತು. ಆದರೆ ತಮ್ಮ ನೆಲೆಯನ್ನೇ ಕಳೆದುಕೊಂಡಿದ್ದ ಅವರ ಬದುಕಿನ ಗತಿ ಬದಲಾಗಿಬಿಟ್ಟಿತು.

***

ದೇಶದಲ್ಲಿಯೇ ಕಲ್ಲಿದ್ದಲಿನ ಸಂಪತ್ತು ತುಂಬಿ ತುಳುಕುತ್ತಿರುವ ಶ್ರೀಮಂತ ನೆಲವೆಂದು ಗುರುತಿಸಿಕೊಂಡಿರುವ ಜಾರ್ಖಂಡ್‌ನ ಧನಬಾದ್‌ನಲ್ಲಿನ ಝರಿಯಾದಲ್ಲಿ ಇಂಥ ಕಥೆಗಳು ಹೆಜ್ಜೆಗೊಂದರಂತೆ ಸಿಗುತ್ತವೆ. ನೂರಾರು ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಕಲ್ಲಿದ್ದಲು ಗಣಿಗಾರಿಕೆಯಿಂದ ನಲುಗಿ ಕುದಿಯುತ್ತಿರುವ ನೆಲ ಒಂದೆಡೆಯಾದರೆ, ಶ್ರೀಮಂತ ನೆಲದಲ್ಲಿದ್ದರೂ ಕಡು ಬಡತನದಲ್ಲಿ ಬೇಯುತ್ತಿರುವ ಜನರ ಬದುಕಿನ ಚಿತ್ರಣ ಮತ್ತೊಂದೆಡೆ.

ಝರಿಯಾ, ಪುಟ್ಟ ಪುಟ್ಟ ಹಳ್ಳಿಗಳನ್ನು ಒಡಲಲ್ಲಿಟ್ಟುಕೊಂಡಿರುವ ದೊಡ್ಡ ಊರು. ಪ್ರತಿ ಮೂಲೆಯಲ್ಲೂ ಕಲ್ಲಿದ್ದಲು. ಊರಿಗೆ ಊರೇ ಮಸಿ ಬಳಿದುಕೊಂಡಂತೆ ಕಾಣುವ ಇಲ್ಲಿನ ಕಲ್ಲಿದ್ದಲು ಗಣಿಗಳತ್ತ ಸೂರ್ಯ ಬರುವ ಹೊತ್ತಿಗೇ ಆಜುಬಾಜಿನ ಹಳ್ಳಿಯ ಜನರು ಬುಟ್ಟಿ, ಚೀಲಗಳನ್ನು ಹಿಡಿದು ಇತ್ತ ದಾರಿ ಬೆಳೆಸಿರುತ್ತಾರೆ. ಗಣಿಗಾರಿಕೆ ಮಾಡಿ ಅಗೆದುಬಿಟ್ಟಿರುವ ಸ್ಥಳದಲ್ಲಿ ಸಿಗುವ ಚೂರುಪಾರು ಕಲ್ಲಿದ್ದಲುಗಳನ್ನು ಆಯಲು ಕದ್ದುಮುಚ್ಚಿ ಗಣಿಗಳಿಗೆ ಇಳಿಯುತ್ತಾರೆ.



ಬದುಕುಗಳಿಗೆ ಅಂಟಿದ ಮಸಿಯನ್ನು ತೊಳೆಯುವುದು ಹೇಗೆ?



ಗಣಿಗಳಿಗೆ ಇಳಿಯುವವರ ಪೈಕಿ ಮಕ್ಕಳ ಸಂಖ್ಯೆ ಹೆಚ್ಚು. ಶಾಲೆ ಮುಗಿಯುತ್ತಿದ್ದಂತೆ ಕಲ್ಲಿದ್ದಲಿನ ಗಣಿಗಳತ್ತ ಓಡುವ ಮಕ್ಕಳಲ್ಲಿ, ಕಲ್ಲಿದ್ದಲು ಆಯ್ದು ಮಾರಿದರೆ ಬರುವ ಹಣ ತಮ್ಮ ಭವಿಷ್ಯಕ್ಕೆ ದಿಕ್ಕು ತೋರುತ್ತದೆಂಬ ಭರವಸೆ. ಹೀಗೆ ಕಲ್ಲಿದ್ದಲು ಆಯಲು ಹೋಗಿ ಕಂದಕಕ್ಕೆ ಬಿದ್ದು ಸತ್ತ ಪ್ರಕರಣಗಳಿಗೆ ಲೆಕ್ಕವಿಲ್ಲ. ಕಟ್ಟುನಿಟ್ಟಾದ ಕಣ್ಗಾವಲಿನವರ ಕಣ್ಣು ತಪ್ಪಿಸಿ ಜೀವವನ್ನೇ ಪಣಕ್ಕಿಟ್ಟು ಗಣಿಗಳಿಗೆ ಇಳಿಯುವ ಇವರಲ್ಲಿ ಜೀವಕ್ಕಿಂತ ಹೊಟ್ಟೆ ತುಂಬಿಸಿಕೊಳ್ಳುವ ಚಿಂತೆಯೇ ಹೆಚ್ಚು.

ಈ ನೆಲದಲ್ಲಿ ಕಲ್ಲಿದ್ದಲು ಗಣಿಗಾರಿಕೆ ಆರಂಭಗೊಂಡಿದ್ದು 1894ರಲ್ಲಿ. ಶತಮಾನಗಳ ಕಾಲ ಭೂಗತ ಗಣಿಗಾರಿಕೆಯಿಂದ ಸಾಕು ಸಾಕೆನಿಸುವಷ್ಟು ಕಲ್ಲಿದ್ದಲನ್ನು ಪಡೆಯಲಾಗುತ್ತಿತ್ತು. ಕಲ್ಲಿದ್ದಲು ಮಾತ್ರವಲ್ಲ, ಕಬ್ಬಿಣದ ಅದಿರು, ಬಾಕ್ಸೈಟ್, ತಾಮ್ರ, ಸುಣ್ಣ, ಡೋಲಮೈಟ್, ಮ್ಯಾಂಗನೀಸ್, ಮೈಕಾ, ಚೀನಾ ಕ್ಲೇ, ಗ್ರಾಫೈಟ್, ಮೀಥೇನ್, ಯುರೇನಿಯಂ, ಫಾಸ್ಪರೇಟ್, ಪೈರೊಕ್ಸನೈಟ್ ಹೀಗೆ ಸಾಕಷ್ಟು ಖನಿಜಗಳ ಸಂಗ್ರಹವೂ ಪತ್ತೆಯಾದ್ದರಿಂದ ಗಣಿಗಾರಿಕೆ ಇಲ್ಲಿ ಕಾಯಂ ಆಗಿತ್ತು.

## ಒಡಲ ಉರಿಯಲ್ಲಿ...

ನಂತರದ ವರ್ಷಗಳಲ್ಲಿ ಭೂಗತ ಗಣಿಗಾರಿಕೆ ಕಡಿಮೆಯಾಗಿ, ತೆರೆದ ಗಣಿಗಾರಿಕೆ (open cast mining) ಶುರುವಾಯಿತು. ಕಡಿಮೆ ಸಮಯ, ಕಡಿಮೆ ಖರ್ಚಿನಲ್ಲಿ ಗಣಿಗಾರಿಕೆ ಮಾಡಲು ಆರಿಸಿಕೊಂಡ ತೆರೆದ ಗಣಿಗಾರಿಕೆಯ ಈ ಹಾದಿ ಹಲವು ಸಂಕಟಗಳಿಗೆ ನಾಂದಿ ಹಾಡಿತು. ಭೂಗತ ಗಣಿಗಾರಿಕೆ ನಡೆದಿದ್ದ ಸ್ಥಳಗಳಲ್ಲಿ ತೆರೆದ ಗಣಿಗಾರಿಕೆ ಮಾಡಲು ಆರಂಭಿಸಿದ್ದೇ, ನೆಲದೊಳಗೆ ಕೊರೆದಿದ್ದ ಹಳೆಯ ಸುರಂಗಗಳು ತೆರೆದುಕೊಂಡವು. ಆ ಸುರಂಗದಲ್ಲಿದ್ದ ಕಲ್ಲಿದ್ದಲಿನ ಅವಶೇಷಗಳು ವಾತಾವರಣದಲ್ಲಿನ ಆಮ್ಲಜನಕಕ್ಕೆ ತೆರೆದುಕೊಂಡು ಬೆಂಕಿ ಹೊತ್ತಿಕೊಂಡಿತ್ತು.

ಕೆಲವೇ ವರ್ಷಗಳಲ್ಲಿ ಒಳಗೊಳಗೇ ಆ ಬೆಂಕಿ ಪಸರಿಸಿ ನೆಲದೊಳಗಿನ ಕಲ್ಲಿದ್ದಲು ಹೊತ್ತಿ ಉರಿಯಲು ಆರಂಭಿಸಿತು. ನೋಡನೋಡುತ್ತಿದ್ದಂತೆ ಆ ಬೆಂಕಿಯ ಜ್ವಾಲೆಗಳು ಭೂಮಿಯ ಮೇಲ್ಪದರಕ್ಕೇ ಬಂದು ನಿಂತವು. ಕೆಲವು ಕಡೆ ಭೂಮಿಯಿಂದ ನುಸುಳಿ ನೆಲದಲ್ಲೇ ಕಾಣಿಸಿಕೊಳ್ಳಲು ಆರಂಭಿಸಿದವು. ಯಾವಾಗ ಬೆಂಕಿ ಮನೆಯಂಗಳಕ್ಕೇ ಬಂದು ನಿಂತಿತೋ ಜನರ ಬದುಕೂ ದುರ್ಭರವಾಯಿತು. 1916ರಲ್ಲಿ ಮೊದಲ ಬಾರಿಗೆ ಝರಿಯಾದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು.

ನೆಲವನ್ನು ಬರಿಗಾಲಿನಲ್ಲಿ ಮೆಟ್ಟುವುದು ಸಾಧ್ಯವೇ ಇಲ್ಲವೆಂಬಂತೆ ಝರಿಯಾ, ಸುತ್ತಮುತ್ತಲಿನ ಗ್ರಾಮಗಳ ನೆಲ ಸುಡುಭೂಮಿಯಾಯಿತು. ಮನೆಯೊಳಗೂ ನೆಲದಿಂದ ಹೊಗೆ ಬರುವುದು ಸಾಮಾನ್ಯವಾಯಿತು. ಗೋಡೆಗಳಲ್ಲಿ, ಬಾಗಿಲುಗಳಲ್ಲಿ ಬಿರುಕುಗಳು ಕಾಣಿಸಿಕೊಂಡವು.